ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 671/2021

(ಫ್ರಾಸಾ-6 ಚಾಸಾ-3)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 10.03.2025

| | | |
|---|---|---|
| ಸಾಕ್ಷಿದಾರರ ಹೆಸರು | - | ಸತೀಶ್ ಕುಮಾರ್ |
| ತಂದೆಯ ಹೆಸರು | - | ವಿಲ್ವನಾಥನ್ |
| ವಯಸ್ಸು | - | 42 ವರ್ಷ, |
| ಉದ್ಯೋಗ | - | ಖಾಸಗಿ ಕೆಲಸ |
| ವಾಸ | - | ಹೀಲಲಿಗೆ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

1. 2021ರ ಅಕ್ಟೋಬರ್ ಅಥವಾ ನವೆಂಬರ್ ತಿಂಗಳಿನಲ್ಲಿ ನಾನು ಸಿಂಗೇನ ಅಗ್ರಹಾರದ ಒಂದು ಅಂಗಡಿಗೆ ಹೋಗಿದ್ದು ಅಲ್ಲಿ ಒಂದು ತೋಟದಲ್ಲಿ ಕೊಲೆ ಆಗಿರುವ ವಿಚಾರ ತಿಳಿದು ನಾನು ಸ್ಥಳಕ್ಕೆ ಹೋಗಿ ನೋಡಿದ್ದು ಆಗ ಪೋಲಿಸರು ಸಹ ಸ್ಥಳದಲ್ಲಿದ್ದರು. ಸ್ಥಳದಲ್ಲಿ ಎರಡು ಮೃತದೇಹಗಳಿದ್ದು ಪೋಲಿಸರು ಬಂದು ತನಿಖೆ ಮಾಡಿ ಫೋಟೋ ತೆಗೆದಿರುತ್ತಾರೆ.

2. ಸ್ಥಳದಲ್ಲಿ ಪೋಲಿಸರು ರಕ್ತದ ಕಲೆಗಳನ್ನು, ಮದ್ಯದ ಬಾಟಲ್ ಗಳನ್ನು, ಕಡ್ಡಿಗಳನ್ನು, ಚಪ್ಪಲಿಗಳನ್ನು ಹಾಗೂ ಮೃತದೇಹಗಳ ಮೇಲೆ ಇರುವ ಬಟ್ಟೆಗಳನ್ನು ಪೋಲಿಸರು ತೆಗೆದುಕೊಂಡರು. ಆ ಸಮಯದಲ್ಲಿ ನಾನು ಈಗ ನೋಡುತ್ತಿರುವ ನಿಪಿ-2 ಪಂಚನಾಮೆಗೆ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ಸಾಕ್ಷಿ ಸಹಿ ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯಲ್ಲಿರುವ ಸಾಕ್ಷಿ ಸಹಿಯನ್ನು ನಿಶಾನೆ ಪಿ-2(ಸಿ) ಎಂದು ಗುರುತಿಸಲಾಯಿತು. ಬೇರೆ ಏನು ಇತ್ತು ಸ್ಥಳದಲ್ಲಿ ಇತ್ತು ಹಾಗೂ ಪೋಲಿಸರು ಬೇರೆ ಏನನ್ನು ತೆಗೆದುಕೊಂಡರು ಎಂದು ನನಗೆ ನೆನಪಿಲ್ಲ.

3. ಸದರಿ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದಲ್ಲಿ ಮು.ಮಾ-1, 4 ರಿಂದ 13 ಗಳನ್ನು ನೋಡಿ ಗುರುತಿಸಿರುತ್ತಾರೆ. ಮೃತದೇಹಗಳು ಬಿದ್ದಿರುವ ಜಾಗವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನಿಪಿ-3 ರಿಂದ 7 ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ನನ್ನೊಂದಿಗೆ ಚಾಸಾ-2 ಸಹ ಸ್ಥಳದಲ್ಲಿ ಹಾಜರಿದ್ದು ನಿಪಿ-2 ಕ್ಕೆ ಸಹಿ ಮಾಡಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಸ್‌ಪಿಪಿ ರವರು ವಿನಂತಿಸಿದ್ದರಿಂದ ಸಾಕ್ಷಿಯ ಹೇಳಿಕೆ ಹಾಗೂ ಇತರೆ ನ್ಯಾಯಾಲಯದ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

4. ಪೋಲಿಸರು ಪಂಚನಾಮೆ ಸಮಯದಲ್ಲಿ ಶವದ ಪಕ್ಕ ಬಿದ್ದಿದ್ದ ಈಗ ನೋಡುತ್ತಿರುವ ಮು.ಮಾ-3 ಟೋಪಿಯನ್ನು ಅಮಾನತುಪಡಿಸಿಕೊಂಡರು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎನ್ ವಿ ವಕೀಲರಿಂದಃ**

5. ಪಂಚಸಾಕ್ಷಿದಾರರಾಗಲು ಪೋಲಿಸರು ನನಗೆ ಲಿಖಿತ ನೋಟೀಸ್ ನೀಡಿಲ್ಲ. ಕೃತ್ಯ ನಡೆದ ಸ್ಥಳವು ನನಗೆ ಸೇರಿದ ಸ್ವತ್ತು ಅಲ್ಲ ಎಂದರೆ ಸರಿ. ಪಂಚನಾಮೆ ಮಾಡಿದ ದಿನ ನಿಖರವಾಗಿ ಹೇಳಲು ನೆನಪಿಲ್ಲ. ನಾನು ಆ ಸಮಯದಲ್ಲಿ ಕೃತ್ಯ ನಡೆದ ಸ್ಥಳದಲ್ಲಿ ಇರಲಿಲ್ಲ ಹಾಗೂ ನನ್ನ ಸಮಕ್ಷಮ ಪೋಲಿಸರು ನಿಪಿ-2 ರಂತೆ ಪಂಚನಾಮೆಯನ್ನು ಮಾಡಿರುವುದಿಲ್ಲ ಹಾಗೂ ಮು.ಮಾ-1, 3 ರಿಂದ 13 ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮು.ಮಾ-9 ರಿಂದ 11 ಇವುಗಳ ಮುಚ್ಚಳ ಇತ್ತೋ ಇಲ್ಲವೋ ನನಗೆ ನೆನಪಿಲ್ಲ. ಸದರಿ ಬಾಟಲ್ ಗಳು ಯಾವ ಕಂಪನಿಯ ಬಿಯರ್ ಬಾಟಲ್ ಗಳು ಎಂದು ನನಗೆ ಈಗ ನೆನಪಿಲ್ಲ. ಜಪ್ತಿ ಮಾಡಿಕೊಂಡು ಚಪ್ಪಲ್ ಗಳು ಯಾವ ಕಂಪನಿಯ ಚಪ್ಪಲ್ ಗಳು ಎಂದು ನನಗೆ ನೆನಪಿಲ್ಲ. ನಾನು ಸ್ಥಳದಲ್ಲಿ ನಿಪಿ-2 ಕ್ಕೆ ಸಹಿ ಹಾಕಿರದೇ ಪೋಲಿಸ್ ಠಾಣೆಯಲ್ಲಿ ಹಾಕಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು